# ಗೌರವಾನ್ವಿತ ಪ್ರಧಾನ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ, ಗುಬ್ಬಿ

ಅಸಲು ದಾವಾ ನಂ. 313/2016

ವಾದಿ : ಕಾಂತರಾಜು

ವಿರುದ್ಧ

ಪ್ರತಿವಾದಿಗಳು : ನಾಗರಾಜು ಮತ್ತು ಇತರರು

## ಪ್ರಮಾಣ ಪತ್ರಿಕೆ

ಸಾಕ್ಷಿದಾರನ ಹೆಸರು : ಹನುಮಂತಯ್ಯ
ತಂದೆಯ ಹೆಸರು : ದಾಸಣ್ಣ
ವಯಸ್ಸು : 70 ವರ್ಷ
ಉದ್ಯೋಗ : ವ್ಯವಸಾಯ
ವಾಸ : ಯಡವನಹಳ್ಳಿ, ಗುಬ್ಬಿ ತಾಲ್ಲೂಕು.

1 — 6/8/2026.

ಹನುಮಂತಯ್ಯ ಆದ ನಾನು ಪ್ರಮಾಣ ಮಾಡಿ ಹೇಳುವುದೇನೆಂದರೆ,

ನನಗೆ ಈ ದಾವಾದ ವಾದಿ ಮತ್ತು ಪ್ರತಿವಾದಿ ಗೊತ್ತು. ವಾದಿ ಮತ್ತು ಪ್ರತಿವಾದಿ ನನ್ನ ಸಹೋದರರಾದ ತಿಮ್ಮಯ್ಯ ಮತ್ತು ವೆಂಕಟಪ್ಪನ ಮಕ್ಕಳು. ನನ್ನ ತಂದೆ ದಾಸಣ್ಣನವರಿಗೆ ತಿಮ್ಮಕ್ಕ @ ಸಣ್ಣಮ್ಮ ಎಂಬ ಸಹೋದರಿ ಇದ್ದರು. ನನ್ನ ತಂದೆ ತಿಮ್ಮಯ್ಯರವರು ಎರಡು ಆಸ್ತಿಗಳನ್ನು ತನ್ನ ತಂಗಿಯಾದ ತಿಮ್ಮಕ್ಕ @ ಸಣ್ಣಮ್ಮ ಇವರ ಹೆಸರಿನಲ್ಲಿ ಕೊಂಡಿದ್ದರು. ವಾದಿಯು ಸದರಿ ತಿಮ್ಮಕ್ಕ @ ಸಣ್ಣಮ್ಮರವರ ದತ್ತುಪುತ್ರ ಎನ್ನುವುದು ಸುಳ್ಳು.

ದಿನಾಂಕ:27-06-2005 ರಂದು ದಾಸಣ್ಣ ಮತ್ತು ತಿಮ್ಮಯ್ಯನವರ ಮಕ್ಕಳುಗಳಾದ ನಾವುಗಳು ನಮ್ಮ ಒಟ್ಟು ಕುಟುಂಬದ ಸ್ವತ್ತುಗಳನ್ನು ಪಂಚಾಯತ್ ಪಾರೀಕತ್ ಮುಖಾಂತರ ವಿಭಾಗ ಮಾಡಿಕೊಂಡೆವು. ದಾವಾ ಸ್ವತ್ತು ನಿವೇಶನವಾಗಿರುವುದರಿಂದ ಅದನ್ನು ವಿಭಾಗ ಮಾಡಲು ಆಗಲಿಲ್ಲ. ಅದ್ದರಿಂದ 1ನೇ ಪ್ರತಿವಾದಿಯು ದಾವಾ ಸ್ವತ್ತನ್ನು ತನ್ನ ಭಾಗಕ್ಕೆ ಪಡೆದನು ಹಾಗೂ ದಾವಾ ಸ್ವತ್ತಿನ ಬಾಬ್ತು ರೂ.30,000-00 ಗಳನ್ನು ಇತರೆ ಭಾಗದಾರರುಗಳಾದ ನಮಗೆ ಕೊಟ್ಟರು. ಅದರಂತೆ ದಾವಾ ಸ್ವತ್ತು 1ನೇ ಪ್ರತಿವಾದಿಗೆ ಸೇರಿದ ಸ್ವತ್ತೆಂದು ಸದರಿ ಪಂಚಾಯತ್ ಪಾರಿಕತ್‌ನಲ್ಲಿ ನಮೂದು ಮಾಡಿರುತ್ತದೆ. ಆನಂತರ ದಾವಾ ಸ್ವತ್ತಿನ ಖಾತೆಯನ್ನು 1ನೇ ಪ್ರತಿವಾದಿಯು ತನ್ನ ಹೆಸರಿಗೆ ವರ್ಗಾಯಿಸಿಕೊಂಡನು ಹಾಗೂ ದಾವಾ ಸ್ವತ್ತಿನ ಸ್ವಾಧೀನಾನುಭವವನ್ನು ಹೊಂದಿದ್ದನು. ಆನಂತರ ದಾವಾ ಸ್ವತ್ತನ್ನು 2ನೇ ಪ್ರತಿವಾದಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದನು. ಈಗ ದಾವಾ ಸ್ವತ್ತಿಗೆ 2ನೇ ಪ್ರತಿವಾದಿಯು ಮಾಲೀಕರಾಗಿ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ದಾವಾ ಸ್ವತ್ತಿನ ಖಾತೆಯು 2ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ.

ಸದರಿ ತಿಮ್ಮಕ್ಕ @ ಸಣ್ಣಮ್ಮರವರ ಹೆಸರಿನಲ್ಲಿ ದಾವಾ ಸ್ವತ್ತನ್ನು ಮತ್ತು ಕಡಬ ಅಮಾನಿಕೆರೆ ಗ್ರಾಮದ ಸರ್ವೇ ನಂ.95/2 ರ 1 ಎಕರೆ 18 ಗುಂಟೆ ಜಮೀನನ್ನು ನಮ್ಮ ತಂದೆ ಕೊಂಡಿದ್ದರು. ಸದರಿ ತಿಮ್ಮಕ್ಕ @ ಸಣ್ಣಮ್ಮರವರು ಮೃತರಾಗಿರುತ್ತಾರೆ. ಸದರಿ ದಿನಾಂಕ:27-06-2005 ರ ಮೇಲ್ಕಂಡ ಪಂಚಾಯತ್ ಪಾರಿಕತ್‌ನಂತೆ ಸದರಿ ಸರ್ವೇ ನಂ.95/2 ರ 1 ಎಕರೆ 18 ಗುಂಟೆ ಜಮೀನನ್ನು ದಾಸಣ್ಣನವರ ಮಕ್ಕಳಾದ ನಾನು

ಹನುಮಂತಯ್ಯ

TALUK ... NOTARY ... EXPIRE DATE 14.11.2027 ... DISTRICT

ಹಾಗೂ ನನ್ನ ತಮ್ಮ ವೆಂಕಟಾಚಲಯ್ಯ ಮತ್ತು ವೆಂಕಟಪ್ಪ ಹಾಗೂ ನನ್ನ ಚಿಕ್ಕಪ್ಪ ಚಿಕ್ಕತಿಮ್ಮಯ್ಯನವರ ಮಕ್ಕಳಾದ ಗೋವಿಂದಯ್ಯ, ಗೋಪಾಲಯ್ಯ, ಶ್ರೀನಿವಾಸ, ಹನುಮಂತಯ್ಯ, ಮೂಡ್ಲಯ್ಯ, ಶಂಕರಯ್ಯ ವಿಭಾಗಮಾಡಿಕೊಂಡೆವು. ಸದರಿ ವಿಭಾಗದಂತೆ ಕಡಬ ಅಮಾನಿಕೆರೆಯ ಸರ್ವೆ ನಂ.95/2 ರ ಜಮೀನಿನಲ್ಲಿ ದಾಸಣ್ಣನವರ ಮಕ್ಕಳಾದ ನನ್ನ ಮತ್ತು ನನ್ನ ಸಹೋದರರ ಭಾಗಕ್ಕೆ 28.08 ಗುಂಟೆ ಜಮೀನು ಹಾಗೂ ನನ್ನ ಚಿಕ್ಕಪ್ಪ ಚಿಕ್ಕತಿಮ್ಮಯ್ಯನವರ ಮಕ್ಕಳಾದ ಗೋವಿಂದಯ್ಯ ಮತ್ತು ಇತರರ ಭಾಗಕ್ಕೆ 29.08 ಗುಂಟೆ ಜಮೀನು ಬಂದಿತು. ಅದರಂತೆ 28.08 ಗುಂಟೆ ಜಮೀನಿನಲ್ಲಿ ನಾನು ಮತ್ತು ನನ್ನ ಸಹೋದರರು ಅನುಭವಿಸುತ್ತಿದ್ದು ಆನಂತರ ಸದರಿ 28.08 ಗುಂಟೆ ಜಮೀನನ್ನು ನಾವುಗಳು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಅನುಭವಿಸುತ್ತಿದ್ದೇವೆ. ನನ್ನ ಸಹೋದರ ಸದರಿ ವೆಂಕಟಪ್ಪ ವಾದಿಯ ತಂದೆಯಾಗಿದ್ದು ಆತನು ಸಹ ಸರ್ವೆ ನಂ.95/2 ರ ಜಮೀನಿನ ತನ್ನ ಭಾಗದಲ್ಲಿ ಬೆಳೆಯನ್ನು ಬೆಳೆದುಕೊಂಡು ಅನುಭವಿಸುತ್ತಿದ್ದಾರೆ.

ಮೇಲ್ಕಂಡ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆಂದು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ನನ್ನ ಸಹಿಯನ್ನು ಮಾಡಿರುತ್ತೇನೆ.

ಗುರುತುಬಲ್ಲಂತಹವರು

ಪ್ರಮಾಣೀಕರಿಸುವವ

ವಕೀಲರು
ಗುಬ್ಬಿ
ದಿನಾಂಕ 27-11-26

REVENUE TALUK
B.S. SURESH
NOTARY
REG. No. LAW LOU 220/2022
EXPIRE DATE 14-11-2027
TUMAKURU

... of the ... affidavit ... read over and explained ... in the language known ... correctly to understand ... his name and made his mark in my presence.

... RY.
GUBBI